ಇ) ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 96ರಂತೆ ಕ್ರಮ ಕೈಗೊಳ್ಳಲಾಗುವುದು.

ದೈವಿವನ ಅಭಿವೃದ್ಧಿ

379(3620); ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ (ಸವದತ್ತಿ ಯಲ್ಲಮ್ಮ)

ಅ) ಯಲ್ಲಮ್ಮಗುಡ್ಡದಲ್ಲಿರುವ ದೈವಿ ವನವನ್ನು ಪೂರ್ಣವಾಗಿ ಅಭಿವೃದ್ಧಿ ಪಡಿಸಲು ಸರ್ಕಾರ ಅರಣ್ಯ ಇಲಾಖೆಗೆ ಅನುದಾನ ಬಿಡುಗಡೆ ಮಾಡಿದಿಯೇ; ದೈವಿ ವನ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಲು ಸರ್ಕಾರವು ಯಾವ ಕಾಲಮಿತಿ ನಿಗದಿಪಡಿಸಿದೆ; (ವಿವರ ನೀಡುವುದು);

ಆ) ಮಲ್ಲಮ್ಮನ ಗುಡ್ಡದಲ್ಲಿರುವ ದೈವಿವನವು ಅರಣ್ಯ ಅಭಿವೃದ್ಧಿಗೆ ಹೆಚ್ಚು ಉಪಯುಕ್ತವಾಗಿರುವ ಹಿನ್ನೆಲೆಯಲ್ಲಿ ಇನ್ನು ಎಷ್ಟು ಇಂತಹ ದೈವಿ ವನಗಳನ್ನು ಸವದತ್ತಿ ಕ್ಷೇತ್ರದಲ್ಲಿ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ರಮಾನಾಥ್ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಗೋಕಾಕ್ ವಿಭಾಗದ ಸವದತ್ತಿ ತಾಲ್ಲೂಕಿನ ಯಲ್ಲಮ್ಮನಗುಡ್ಡದಲ್ಲಿರುವ ದೈವಿವನವನ್ನು ಪೂರ್ಣ ಪ್ರಮಾಣದಲ್ಲಿ ನಿರ್ಮಾಣ ಮಾಡಲಾಗಿದೆ ಹಾಗೂ ಸದರಿ ನಿರ್ಮಾಣಕ್ಕೆ ಸರ್ಕಾರ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಅನುದಾನದ ವಿವರ ಈ ಕೆಳಕಂಡಂತಿದೆ.

ಕ್ರಸಂ	ವರ್ಷ	ಬಿಡುಗಡೆಯಾದ ವಾರ್ಷಿಕ ಅನುದಾನ (₹ ಲಕ್ಷಗಳಲ್ಲಿ)	ವೆಚ್ಚ ಭರಿಸಿದ ಅನುದಾನ (₹ ಲಕ್ಷಗಳಲ್ಲಿ)
1	2011–12	104.00	104.00
2	2012–13	53.59	53.59
3	2013–14	3.00	3.00

ಆ) ಸಪದತ್ತಿ ಕ್ಷೇತ್ರದಲ್ಲಿ ಇಂತಹ ಬೇರೆ ದೈವಿವನಗಳನ್ನು ನಿರ್ಮಿಸಲು ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಜವಳಿ ಪಾರ್ಕ್ ಪ್ರಾರಂಭಿಸುವುದು

380(4458); ಶ್ರೀ ವಿನಯ್ ಕುಲಕರ್ಣಿ (ಧಾರವಾಡ)

ಅ) ಧಾರವಾಡ ಜಿಲ್ಲೆ ಹಾಗೂ ಧಾರವಾಡದ 71 ಕ್ಷೇತ್ರದಲ್ಲಿ ಜವಳಿ ಪಾರ್ಕ್ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಜವಳಿ ಪಾರ್ಕ್ ಪ್ರಾರಂಭಿಸಲು ಕ್ಷೇತ್ರದಲ್ಲಿ ಸ್ಥಳ ಗುರುತಿಸಲಾಗಿದೆಯೆ, ಹಾಗಿದ್ದಲ್ಲಿ, ಯಾವ ಸ್ಥಳದಲ್ಲಿ ಪ್ರಾರಂಭಿಸಲಾಗುವುದು, ಅದಕ್ಕೆ ತಗಲುವ ವೆಚ್ಚವೆಷ್ಟು (ವಿವರ ನೀಡುವುದು)?

ಶ್ರೀ ಬಾಬುರಾವ್ ಚಿಂಚನಸೂರ (ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಧಾರವಾಡದಲ್ಲಿ ಜವಳಿ ಪಾರ್ಕ್ ಸ್ಥಾಪಿಸಬೇಕಾದಲ್ಲಿ ಉದ್ದಿಮೆದಾರರು ಸೇರಿ ಕಂಪನಿ ನಿಯಮಗಳನ್ವಯ ಎಸ್.ಪಿ.ವಿ ರಚಿಸಬೇಕು.

- ಎಸ್.ಪಿ.ವಿ ರಚಿಸಲು ಕನಿಷ್ಠ 5 ಉದ್ಯಮಶೀಲರನ್ನು ಹೊಂದಿರಬೇಕು.
- ಕೈಗಾರಿಕೆಗೆ ಬೇಕಾದ ಜಮೀನು ಎಸ್.ಪಿ.ವಿ ಕಂಪನಿಯ ಹೆಸರಿನಲ್ಲಿರಬೇಕು.
- ನೂತನ ಜವಳಿ ನೀತಿಯಡಿ ಜವಳಿ ಪಾರ್ಕ್ ಸ್ಥಾಪಿಸಲು ಕನಿಷ್ಠ 15 ಎಕರೆ ಕೈಗಾರಿಕಾ ಜಮೀನನ್ನು ಹೊಂದಿರಬೇಕು.